ದಿನಾಂಕ: 30 ಏಪ್ರಿಲ್ 2014

# ಪ್ರಚಾರ ದಿನಚರಿ-30/04/2014

ಅರುಣ್ ಜೇಟ್ಲಿ
(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)

ಇಂದು ಅಮೃತಸರದಲ್ಲಿ ಚುನಾವಣಾ ದಿನ. ಸುಡು ಬಿಸಲಿನಲ್ಲಿ ಕಳೆದ ಆರು ವಾರಗಳ ಪ್ರಚಾರಕಾರ್ಯ ಪೂರ್ಣಗೊಂಡ ನಂತರ, ಈಗ ನಾನು ಚುನಾವಣೆ ಬಾಕಿ ಇರುವ ರಾಜ್ಯಗಳಿಗೆ ತೆರಳಲು ಅವಕಾಶ ಕಲ್ಪಿಸಿದೆ. ನನ್ನ ಅಮೃತಸರ ವಾಸ್ತವ್ಯದ ಭಾಗವಾಗಿ ನನಗೆ ರುಚಿಸಿದ್ದು ಇಲ್ಲಿಯ ತಿನಿಸುಗಳು. ಭಾರತದ ಊಟೋಪಚಾರಗಳ ರಾಜಧಾನಿ ಅಮೃತಸರವೆಂಬ ಭಾವನೆ ನನ್ನದು.

ಅಮೃತಸರದ ಕುಲ್ಚಾಗಳು ಮತ್ತು ಚನಾಗಳು ರಾಷ್ಟ್ರೀಯ ಮನ್ನಣೆ ಗಳಿಸಿವೆ. ಭಾರತದ ಹಲವು ಭಾಗಗಳಲ್ಲಿ ಪ್ರಖ್ಯಾತರಾದ ಬಾಣಸಿಗರು ವ್ಯವಸ್ಥೆಗೊಳಿಸುವ ಓತಣಕೂಟಗಳಲ್ಲಿ ಅಮೃತಸರ ಧಾಭಾ ಆಹಾರ ಮಳಿಗೆಗೆ ಒಂದು ಸ್ಥಾನ ಸದಾ ಕಲ್ಪಿಸುವುದುಂಟು. ಕುಲ್ಚಾಗಳನ್ನು ಚನಾದೊಂದಿಗೆ ಬಡಿಸುವ ಹಾಗೂ ಜೊತೆಗೆ ಈರುಳ್ಳಿ ಚಟ್ನಿ ನೀಡುವ ಸಂಪ್ರದಾಯ ನಗರದ ಬಹುಪಾಲು ಎಲ್ಲಾ ಉಪಹಾರ ಮಂದಿರಗಳಲ್ಲಿವೆ. ಬೆಳಗಿನ ಉಪಹಾರ, ಮಧ್ಯಾನ ಹಾಗೂ ರಾತ್ರಿಯ ಊಟಕ್ಕೆ ಕುಲ್ಚಾ ಚನಾ ಅಸ್ವಾದಿಸುವವರೇ ಹೆಚ್ಚು.

ಬೆಳಗಿನ ಉಪಹಾರಕ್ಕೆ ಹೆಚ್ಚಾಗಿ ಪಲ್ಯದ ಹೂರ್ಣ ತುಂಬಿದ ಪರಾಠ ಅಥವಾ ಪೂರಿ ಛೋಲೆಯನ್ನೇ ಅಮೃತಸರದಲ್ಲಿ ತಿನ್ನುವುದೂವುಂಟು. ಪೂರಿ ಛೋಲೆಯನ್ನು ಮನೆಯಲ್ಲಿ ತಯಾರಿಸುವ ಬದಲು ಖ್ಯಾತ ಬಾಣಸಿಗರ ಅಂಗಡಿಗಳಲ್ಲೇ ಖರೀದಿಸುವ ಸಂಪ್ರದಾಯವನ್ನು ಅಮೃತಸರ ನಗರವಾಸಿಗಳು ಅನುಸರಿಸುತ್ತ ಬಂದಿದ್ದಾರೆ. ನಗರದ ಹಳೆ ಪೇಟೆಗಳಲ್ಲಿ ವಿಶೇಷ ಹಲವಾಯಿಗಳು ಅಥವಾ ಬಾಣಸಿಗರು ತಮ್ಮದೇ ಉಪಹಾರ ಮಂದಿರಗಳನ್ನು ಹೊಂದಿದ್ದಾರೆ. ಆದರೆ ನಗರದ ಅತಿ ಪ್ರಚಲಿತವಾದ ಬಾಣಸಿಗರು ಲಾರೆನ್ಸ ರಸ್ತೆಯ ಕನ್ಹಯ್ಯ ಉಪಹಾರ ಮಂದಿರದಲ್ಲಿ ತಿನಿಸುಗಳನ್ನು ತಯಾರಿಸುತ್ತಾರೆ. ಚನಾ ಮತ್ತು ಆಲುಗಡ್ಡೆ ಮಿಶ್ರಿತ ಪಲ್ಯ ಸಿದ್ಧಪಡಿಸುತ್ತಾರೆ. ಬೆಳಗಿನ ಉಪಹಾರಕ್ಕೆ ಇದನ್ನೇ ಹೆಚ್ಚು ಅಸ್ವಾದಿಸುವ ಸಲಹೆಗಳು ಕೇಳಬಂದರು ಕೊಬ್ಬಿನಾಂಶ ಹೆಚ್ಚಾದ್ದರಿಂದ ಮಿತಿಯೊಳಗೆ ತಿನ್ನುವುದು ಒಳಿತು. ಇಂತಹ ಹಲವಾರು ಹಲವಾಯಿಗಳ ಅಂಗಡಿಗಳಲ್ಲಿ ಲಸ್ಸಿ ಅಥವಾ ಮಜ್ಜಿಗೆಯನ್ನು ಸಹ ಮಾರಲಾಗುತ್ತದೆ. ಈ ಪಾನೀಯದ ತಯಾರಿಕೆಯಲ್ಲಿ ಅಹುಜಾ ಮತ್ತು ಗ್ಯಾನ್ ಬಾಣಿಸಗರು ಎತ್ತಿದ ಕೈ. ಜಗತ್ತು ಮರಿಸಲು ಅವರ ಬಳಿ ಉತ್ಕೃಷ್ಟ ಪಾನೀಯಗಳಿವೆ. ಶಾಕಾಹಾರಿ ತಿನಿಸುಗಳಲ್ಲಿ ಕೇಸರ್ ಎಂಬ ಉಪಹಾರ ಮಂದಿರ ಹೆಸರು

ಗಳಿಸಿದೆ. ನಗರದ ಪ್ರಖ್ಯಾತ ಢಾಭಾ ಎಂಬ ಹೆಗ್ಗಳಿಕೆಗೆ ಅದು ಪಾತ್ರವಾಗಿದೆ. ಭರಾವನ್ ಎಂಬ ಹೆಸರಿನ ಸರಣಿ ಉಪಹಾರಗೃಹಗಳು ಭರಾವನ್ ಅಥವಾ ಬ್ರದರ್ಸ್ ಎಂಬ ಹೆಸರಿನಲ್ಲಿ ಹಲವಾರು ಉಪಹಾರಗೃಹಗಳನ್ನು ನಡೆಸುತ್ತಿದ್ದು, ಪ್ರವಾಸಿಗರು ಹಾಗೂ ಸ್ಥಳೀಯರು ಶಾಖಾಹಾರಿ ತಿನಿಸುಗಳನ್ನು ಅಸ್ವಾದಿಸಲು ಇಲ್ಲಿಗೆ ಹೋಗಲು ಇಷ್ಟ ಪಡುತ್ತಾರೆ.

ಮಾಂಸಾಹಾರಿಗಳು ಹೆಚ್ಚಾಗಿ ಸುರ್ಜಿತ್ ಎಂಬ ಪಾಕಶಾಲೆಗೆ ಭೇಟಿ ನೀಡುತ್ತಾರೆ. ಇವರು ಸಿದ್ಧ ಪಡಿಸುವ ತಂದೂರಿ ಚಿಕನ್, ಅಮೃತಸರದ ಮೀನು ಹಾಗೂ ಮಟನ್ ಚಾಪ್ಸ್(ಹಳೆ ಇಂಗ್ಲಿಷ್ ಕಟ್ಲೆಟ್ ರೀತಿ ಬೇಯಿಸಿರುತ್ತಾರೆ) ನಿಜಕ್ಕೂ ಸ್ವಾದಿಷ್ಟಕರ. ಮಾಖನ್ ಮೀನಂತೂ ತಿಂಡಿಪೋತರ ತನುಮನಗೆಲ್ಲುತ್ತದೆ. ಈವರೆಗು ಭೇಟಿ ನೀಡಲು ಸಾಧ್ಯವಾಗದ ಆದರೆ ಉತ್ತಮ ಗುಣಮಟ್ಟದ ಚಿಕ್ಕನ್‌ಗೆ ಹೆಸರುವಾಸಿಯಾದ 'ಬೀರಾ' ಎಂಬ ಮತ್ತೊಂದು ಊಟದ ಮನೆ ಇಲ್ಲಿದೆ.

ಇಡೀ ನಗರದಲ್ಲಿ ಪಸರಿಸುವ ವದಂತಿಗಳು ಹುಟ್ಟುವುದು ದಿನಬೆಳಗಾದರೆ ಜನ ಸೇರುವ ಗಿಯಾನಿ ಟೀ ಅಂಗಡಿಯಲ್ಲಿ. ಲೋಧಿ ಗಾರ್ಡನ್ ಟೀ ಅಂಗಡಿಗೆ ಪರ್ಯಾಯ ಇದಾಗಿತ್ತು.

ಇಂತಹ ನಳಪಾಕ ತಯಾರಿಕಾ ಕೇಂದ್ರಗಳಿಗೆ ದೇಶದ ಉದ್ದಗಲಕ್ಕೂ ಬ್ರ್ಯಾಂಡ್ ಮೌಲ್ಯಾಂಕನ ನೀಡುವ ಅಗತ್ಯವಿದೆ.

✲✲✲✲✲